**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 3362/2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.06**

**ದಿನಾಂಕಃ 13.03.2025** **ಸಿಡಬ್ಲ್ಯೂ.16**

| | |
|---|---|
| ಹೆಸರು | ಪಾಲಾಕ್ಷಿ ಡಿ ಟಿ |
| ತಂದೆ ಹೆಸರು | ತಿಮ್ಮಪ್ಪ |
| ವಯಸ್ಸು | 55 ವರ್ಷ |
| ಉದ್ಯೋಗ | ಎ ಎಸ್ ಐ |
| ವಾಸ ಸ್ಥಳ | ಮಲೆಬೆನ್ನೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಜನವರಿ 2022 ರಿಂದ ಇಲ್ಲಿಯವರೆಗೆ ಮಲೆಬೆನ್ನೂರು ಠಾಣೆಯಲ್ಲಿ ಎ ಎಸ್ ಐ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 06.03.2025 ರಂದು ಚಾಸಾ.18 ರವರ ಮೌಖಿಕ ನಿರ್ದೇಶನದ ಮೇರೆಗೆ ಸಿ ಜೆ ಆಸ್ಪತ್ರೆ ಶವಾಗಾರದಲ್ಲಿ ಚಾಸಾ.2 ಮತ್ತು 3 ರವರಿಗೆ ನೋಟಿಸ ಜಾರಿ ಮಾಡಿ ಶವತನಿಖೆಗೆ ಸಹಕರಿಸಲು ಕೇಳಿಕೊಂಡಿದ್ದು ಅವರು ಒಪ್ಪಿರುತ್ತಾರೆ. ಸಾಕ್ಷಿಯು ಗುರುತಿಸಿದ ನೋಟಿಸನ್ನು ನಿಪಿ. 12 ಎಂದು ಸಾಕ್ಷಿಯ ಸಹಿಯನ್ನು ನಿಪಿ.12 (ಎ) ಎಂದು ಗುರುತಿಸಲಾಯಿತು. ನಂತರ ಸದರಿಯವರ ಸಮಕ್ಷಮ ಬೆಳಿಗ್ಗೆ 9.00 ರಿಂದ 10.30 ರವರೆಗೆ ಮೃತ ಹನುಮಂತಮ್ಮನವರ ಶವ ಪಂಚನಾಮೆ ಜರುಗಿಸಿ ಶವತನಿಖಾ ವರದಿ ತಯಾರಿಸಿರುತ್ತೇನೆ. ಸಾಕ್ಷಿಯು ಗುರುತಿಸಿದ ಶವತನಿಖಾ ವರದಿಯನ್ನು ನಿಪಿ. 13 ಎಂದು ಸಾಕ್ಷಿಯ ಸಹಿಯನ್ನು ನಿಪಿ.13 (ಎ) ಎಂದು ಗುರುತಿಸಲಾಯಿತು. ಸದರಿ ಕಾಲಕ್ಕೆ ಪೊಟೋ ತೆಗೆದಿದ್ದು ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ನಿಪಿ.14 ಮತ್ತು 15 ಎಂದು ಗುರುತಿಸಲಾಗಿದೆ. ನಂತರ ಮೃತರ ಸಂಬಂದಿಕರಾದ ಚಾಸಾ.4 ಮತ್ತು 5 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಸಾಕ್ಷಿದಾರರಾದ ಚಾಸಾ.6 ಮತ್ತು 7 ರವರ ಹೇಳಿಕೆ ಪಡೆದಿರುತ್ತೇನೆ.

ದಿಃ 07.03.2025 ರಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ.8 ಮತ್ತು 9 ರವರಿಗೆ ನೋಟಿಸ ಜಾರಿ ಮಾಡಿ ಪಂಚನಾಮೆಗೆ ಸಹಕರಿಸಲು ಕೇಳಿಕೊಂಡಿದ್ದು ಅವರು ಒಪ್ಪಿರುತ್ತಾರೆ. ಸಾಕ್ಷಿಯು ಗುರುತಿಸಿದ ನೋಟಿಸನ್ನು ಈಗಾಗಲೇ ನಿಪಿ. 5 ಎಂದು ಸಾಕ್ಷಿಯ ಸಹಿಯನ್ನು ನಿಪಿ.5 (ಸಿ) ಎಂದು ಗುರುತಿಸಲಾಯಿತು. ಸದರಿಯವರ ಸಮಕ್ಷಮ ಸಂಜೆ 4.30 ರಿಂದ 5.30 ರವರೆಗೆ ಕೃತ್ಯ ನಡೆದ ಪಂಚನಾಮೆ ಜರುಗಿಸಿರುತ್ತೇನೆ.

ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿಪಿ. 2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2 (ಸಿ) ಎಂದು ಗುರುತಿಸಲಾಯಿತು. ಸದರಿ ಕಾಲಕ್ಕೆ ಕಚ್ಚಾ ನಕಾಶೆ ಮತ್ತು ಛಾಯ ಚಿತ್ರ ತೆಗೆದಿರುತ್ತೇವೆ. ಸಾಕ್ಷಿಯು ಗುರುತಿಸಿದ ಕಚ್ಚಾ ನಕಾಶೆಯನ್ನು ಈಗಾಗಲೇ ನಿಪಿ. 3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3 (ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಛಾಯ ಚಿತ್ರವನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದೆ.

ದಿಃ 19.03.2025 ರಂದು ವಾಹನ ಮಾಲೀಕರಾದ ಭರಮಪ್ಪ ರವರು ಮೋಟಾರ ಸೈಕಲನ್ನು ಠಾಣೆಗೆ ಹಾಜರುಪಡಿಸಿದ್ದು ಚಾಸಾ.10 ಮತ್ತು 11 ರವರಿಗೆ ನೋಟಿಸ ಜಾರಿ ಮಾಡಿ ಪಂಚನಾಮೆಗೆ ಸಹಕರಿಸಲು ಕೇಳಿಕೊಂಡಿದ್ದು ಅವರು ಒಪ್ಪಿರುತ್ತಾರೆ. ಸಾಕ್ಷಿಯು ಗುರುತಿಸಿದ ನೋಟಿಸನ್ನು ಈಗಾಗಲೇ ನಿಪಿ. 8 ಎಂದು ಸಾಕ್ಷಿಯ ಸಹಿಯನ್ನು ನಿಪಿ.8 (ಸಿ) ಎಂದು ಗುರುತಿಸಲಾಯಿತು. ಸದರಿಯವರ ಸಮಕ್ಷಮ ಮದ್ಯಾಹ್ನ 12.15 ರಿಂದ 1.00 ರವರೆಗೆ ವಾಹನ ಪಂಚನಾಮೆ ಜರುಗಿಸಿರುತ್ತೇನೆ. ಸಾಕ್ಷಿಯು ಗುರುತಿಸಿದ ವಾಹನ ಪಂಚನಾಮೆಯನ್ನು ಈಗಾಗಲೇ ನಿಪಿ. 9 ಎಂದು ಸಾಕ್ಷಿಯ ಸಹಿಯನ್ನು ನಿಪಿ.9 (ಸಿ) ಎಂದು ಗುರುತಿಸಲಾಯಿತು. ಸದರಿ ಛಾಯ ಚಿತ್ರ ತೆಗೆದಿರುತ್ತೇವೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ಈಗಾಗಲೇ ನಿಪಿ.10 ಮತ್ತು 11 ಎಂದು ಗುರುತಿಸಲಾಗಿದೆ.

ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.18 ರವರಿಗೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಬಿ ಸಿ ವಕೀಲರಿಂದಃ**

ಸ್ಥಳ ಪಂಚನಾಮೆಗೆ ಪಂಚರನ್ನು ನಾನೇ ಬರಮಾಡಿಕೊಂಡಿರುತ್ತೇನೆ. ಸ್ಥಳ ಪಂಚನಾಮೆಯ ಪಂಚರು ಘಟನಾ ಸ್ಥಳದ ಸ್ಥಳೀಕರಲ್ಲ ಎಂದರೆ ಸರಿಯಲ್ಲ. ನಿಪಿ.3 ರಲ್ಲಿ ಅದನ್ನು ತೆಗೆದ ದಿನಾಂಕ ನಮೂದು ಇಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಬೇಟಿ ನೀಡಿಲ್ಲ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆ ಹಾಗೂ ವಾಹನ ಪಂಚನಾಮೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ